ತಾಲ್ಲೂಕುಗಳಿಗೆ ಪ್ರೌಢಶಾಲೆಗಳನ್ನು ಮಂಜೂರು ಮಾಡಿದ ಪಟ್ಟಿ ಲಗತ್ತಿಸಿದೆ.

ಆ) ಮತ್ತು ಇ) ಆಯಾಯಾ ಸ್ಥಳಗಳ ಶೈಕ್ಷಣಿಕ ಅಗತ್ಯತೆ ಮತ್ತು ಆಯವ್ಯಯದಲ್ಲಿನ ಅವಕಾಶದ ಪ್ರಕಾರ ಹಂತ ಹಂತವಾಗಿ ಶಾಲೆಗಳನ್ನು ಮಂಜೂರು ಮಾಡಲಾಗುತ್ತಿದ್ದು, ಇದೊಂದು ಸತತವಾದ ಪ್ರಕ್ರಿಯೆಯಾಗಿದೆ.

1600 (2224) ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ (ಗುಳೇದಗುಡ್ಡ) :– ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲಪ್ರಭಾ ನದಿಗೆ ಕಟ್ಟಲಾದ ಬ್ಯಾರೇಜುಗಳು ಎಷ್ಟು;

ಆ) ಇನ್ನೂ ಕಟ್ಟಲು ಸ್ಥಳ ಪರಿಶೀಲನೆ ಮಾಡಿರುವುದು ಎಷ್ಟು;

ಇ) ಪ್ರತಿ 5 ಕಿಲೋ.ಮೀಟರ್‌ಗೆ ಒಂದರಂತೆ ಬ್ಯಾರೇಜ್ ಕಟ್ಟಲು ಸರ್ಕಾರ ಚಿಂತನೆ ಮಾಡುವುದೇ;

ಈ) ಅದು ಅನುಷ್ಠಾನಕ್ಕೆ ಯಾವಾಗ ಬರುವುದು?

ಶ್ರೀ ಕೆ. ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು):

ಅ) ಜಲಸಂಪನ್ಮೂಲ ಇಲಾಖೆಯಿಂದ (ಬೃಹತ್ ಮತ್ತು ಮಧ್ಯಮ ನೀರಾವರಿ) ಮಲಪ್ರಭಾ ನದಿಗೆ ಅಡ್ಡಲಾಗಿ ಯಾವುದೇ ಬ್ಯಾರೇಜ್‌ಗಳನ್ನು ಈವರೆಗೆ ನಿರ್ಮಿಸಲಾಗಿರುವುದಿಲ್ಲ.

ಆ) ಮಲಪ್ರಭಾ ನದಿಗೆ ಅಡ್ಡಲಾಗಿ ನಮ್ಮೂರು ಬಾಂಧಾರ ಯೋಜನೆಯಡಿ 5 ಬಾಂಧಾರಗಳನ್ನು ನಿರ್ಮಿಸಲು ಈಗಾಗಲೇ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಇದಲ್ಲದೇ ಇನ್ಯಾವುದೇ ಹೊಸ ಬ್ಯಾರೇಜ್‌ಗಳ ನಿರ್ಮಾಣದ ಕುರಿತು ಸ್ಥಳ ಪರಿಶೀಲನೆ ಮಾಡಿರುವುದಿಲ್ಲ.

ಇ) ಭೌಗೋಳಿಕ, ತಾಂತ್ರಿಕ, ಆರ್ಥಿಕ ಮತ್ತು ನೀರಿನ ಹಂಚಿಕೆಗಳ ಮೇಲೆ ಇದು ಅವಲಂಬಿಸುತ್ತಿದ್ದು, ಸದ್ಯಕ್ಕೆ ಪ್ರತಿ 5 ಕಿ.ಮೀ ಅಂತರದಲ್ಲಿ ಮಲಪ್ರಭಾ ನದಿಯ ಮೇಲೆ ಬ್ಯಾರೇಜ್‌ಗಳ ನಿರ್ಮಾಣದ ಕುರಿತು ಚಿಂತನೆಗಳು ನಡೆದಿರುವುದಿಲ್ಲ.

ಈ) ಮೇಲಿನ ಉತ್ತರದಂತೆ ಪ್ರಶ್ನೆ ಉದ್ಭವಿಸುವುದಿಲ್ಲ.

1601 (2100) ಶ್ರೀ ಮೋಹನ್‌ಕೃಷ್ಣ ಶೆಟ್ಟಿ (ಕುಮಟ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಜಿಲ್ಲಾ ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗೆ ನೀಡುವ ಅನುದಾನಕ್ಕೆ ಹೋಲಿಸಿದರೆ ತಾಲ್ಲೂಕು ಪಂಚಾಯತಿಗೆ ನೀಡುವ ಅನುದಾನವು ಸರಿಯಾದ ಅನುಪಾತದಲ್ಲಿರದೇ ಅತಿ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ತಾಲ್ಲೂಕು ಪಂಚಾಯತಿಗೆ ಈಗಿನ ರೂ. 4.00 ಲಕ್ಷ ಗಳಿಂದ ರೂ. 25.00 ಲಕ್ಷಗಳಿಗೆ ಅನುದಾನ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದೇ;

ಇ) ಯಾವ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭೀವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು:

ಅ) ಅನುದಾನವು ತಾಲ್ಲೂಕು ಪಂಚಾಯತಿಗಳಿಗೆ ಪಹಿಸಿರುವ ಕರ್ತವ್ಯಗಳಿಗೆ ಅನುಗುಣವಾಗಿದೆ.

ಆ) ಚಟುವಟಿಕೆ ನಕ್ಷೆ ಪ್ರಕಾರ ಕೆಲವು ಯೋಜನೆಗಳು ಪುನರ್ ವಿಂಗಡಣೆಗೊಂಡು ತಾಲ್ಲೂಕು ಪಂಚಾಯತಿಗೆ ಕೆಲವು ಪ್ರಾಕಾರ್ಯಗಳನ್ನು ಹಂಚಲಾಗಿರುತ್ತದೆ. ಇದರಂತೆ ತಾಲ್ಲೂಕು ಪಂಚಾಯತಿಗೆ ರಾಜ್ಯ ವಲಯದಿಂದ ಜಿಲ್ಲಾ ವಲಯಕ್ಕೆ ಕೆಲವು ಕಾಮಗಾರಿಗಳನ್ನು ವಿಲೀನಗೊಳಿಸಲಾಗಿದೆ. ಅದರಂತೆ ಸಾಕಷ್ಟು ಅನುದಾನ ತಾಲ್ಲೂಕು ಪಂಚಾಯತಿಗೆ ಲಭ್ಯವಾಗುತ್ತದೆ.

ಇ) ಮೇಲಿನ ಪ್ರಶ್ನೆಯ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

1602 (2101) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ